31-3-1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48,84,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಯಾಚನೆ ಕ್ರಮಾಂಕ - 22 - ರಾಜ್ಯದ ಅಬಕಾರಿ

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು, ಹಣಕಾಸು ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯದ ಅಬಕಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,36,22,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಎಲ್ಲಾ ಬೇಡಿಕೆಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಮೈಸೂರಿನ ಕಲಾಮಂದಿರದ ದುರಸ್ತಿ

+ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಅಮರವಾಣಿಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

"ಹಣವು ಪಾದರಸದಂತೆ ಚಂಚಲವಾದುದು, ಯೌವನವು ಬೆಟ್ಟದಿಂದ ಹರಿಯುವ ಹೊಳೆಯಂತೆ ಅಸ್ಥಿರವಾದುದು, ಮನುಷ್ಯನ ಬಾಳು ಸೋಪಿನ ನೊರೆಯಂತೆ ಇಂಗಿಹೋಗುವಂಥದ್ದು, ನಾವು ಮಾಡುವ ಸುಕೃತ್ಯ ದುಷ್ಕೃತ್ಯಗಳಿರಡೇ ಶಾಶ್ವತವಾದುದು".

ಈ ಅಮರವಾಣಿಯ ಮುಖಾಂತರ ಕಲೆಗೆ ಕಣ್ಣಾದ ಕರ್ನಾಟಕ, ಕರ್ನಾಟಕ ಮಾತೆಯನ್ನು ಬಿ.ಎಂ.ಶ್ರೀ.ಯವರು ಭಾರತದ ಹಿರಿಯಮಗಳು ಎಂದು ಕರೆದರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ದಿವಂಗತ ಗುಂಡೂರಾವ್‌ರವರು ಮೈಸೂರು ನಗರಕ್ಕೆ ಒಂದು ಕಲಾಮಂದಿರವನ್ನು ಕೊಡುಗೆಯಾಗಿ ಕೊಟ್ಟರು, ಈಗ ಆ ಕಲಾ ಮಂದಿರ ಕೊಳಕುಮಂದಿರವಾಗಿ ಪರಿವರ್ತನೆಯಾಗಿದೆ. ನಮ್ಮ ಮೈಸೂರಿನ ಆಂಧೋಳನ ದಿನಪತ್ರಿಕೆಯ ಸಂಪಾದಕರು ಮೊನ್ನೆದಿವಸ ಒಂದು ಹೇಳಿಕೆಯನ್ನು ನೀಡಿದ್ದಾರೆ. ನಾವು ಕಲಾಮಂದಿರ ನ್ಯೂನ್ಯತೆಗಳನ್ನು ಸರಿಪಡಿಸದಿದ್ದರೆ ಬೀದಿಗಿಳಿಯಬೇಕಾದುದು ಎನ್ನುವ ಅವರ ಹೇಳಿಕೆಯ ಮಾತನ್ನು ಕೇಳಿದಾಗ, ಒಬ್ಬ ಪ್ರತಿಕೋದ್ಯಮಿಗೆ ಕಲಾಮಂದಿರದ ಬಗ್ಗೆ ಇಷ್ಟೊಂದು ಜವಾಬ್ದಾರಿ ಇರುವಾಗ, ಒಬ್ಬ ಶಾಸಕನಾಗಿ ಕಣ್ಣುಮುಚ್ಚಿಕೊಂಡು ಕುಳಿತಿದ್ದೇವೆಲ್ಲಾ ಎಂದು ನನಗೆ ನಿಜವಾಗಿಯೂ ನೋವಾಗುತ್ತಿದೆ. ನಿಜವಾಗಿಯೂ ಆ ಕಲಾಮಂದಿರದಲ್ಲಿ ಹವಾನಿಯಂತ್ರಣವಿಲ್ಲ, ಕಿಟಕಿಗಳೆಲ್ಲಾ

ಒಡೆದಿದೆ ಕುರ್ಚಿಗಳೆಲ್ಲಾ ಮುರಿದುಹೋಗಿವೆ, ಅದು ವಿಚಿಕ್ರವಾದ ಅಧೋಗತಿಯಲ್ಲಿದೆ. ಆಮೇಲೆ ಮೊನ್ನೆ ಏನು ಹೇಳಿದರೆಂದರೆ, ಯಾರಾದರೂ ಕುಕ್ಕರಹಳ್ಳಿ ಕೆರೆಯನ್ನು ವಹಿಸಿಕೊಳ್ಳುವುದಾದರೆ ಕೊಡುವ ಬಗ್ಗೆ ಪರಿಶೀಲಿಸುವುದೆಂದು ಹೇಳಿದರು. ಅದಕ್ಕೂ ಕೂಡ ಬಂದಿದ್ದಾರೆ. ಅದಕ್ಕೂ ಉತ್ತರ ಕೊಡಲಿ, ಇದಕ್ಕೂ ಉತ್ತರ ಕೊಡಲಿ, ಇದನ್ನು ಯಾರಿಗಾದರೂ ವಹಿಸಿಕೊಡುವುದಕ್ಕೆ ತಯಾರಿದ್ದರೆ ವಹಿಸಿಕೊಡಲಿ, ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ. ಒಟ್ಟಿನಲ್ಲಿ ಕಲಾಮಂದಿರದ ಕೊಳಕನ್ನು ಸರಿಪಡಿಸಿ ಕಲಾಮಂದಿರ ಕಲಾಮಂದಿರವಾಗಿ ಉಳಿಯಬೇಕು, ಏಕೆಂದರೆ ಕನ್ನಡನಾಡು ವೇದದ್ರಷ್ಟಾರ ನಾಡು, ಕವಿಕೋಗಿಲೆಗಳ ಗೂಡು ಎಂದು ತನ್ನದೇ ಆಗಿರುವ ಅತ್ಯುನ್ನತ್ತಿ ಹೊಂದಿರುವ ಈ ಕನ್ನಡ ನಾಡಿಗೆ ಮೆರುಗು ಕೊಟ್ಟಂಥ ಈ ಕಲಾಮಂದಿರ ಇವತ್ತು ಕೊಳಕು ಮಂದಿರವಾಗಿದೆ. ಇದನ್ನು ಸರಿಪಡಿಸಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಸಾಂಸ್ಕೃತಿಕವಾಗಿ ಮಾತನಾಡಿರತಕ್ಕ ಶಂಕರಲಿಂಗೇಗೌಡರು ಕಲಾಮಂದಿರವನ್ನು ಕೊಳಕು ಮಂದಿರ ಎಂದು ಹೇಳಿರತಕ್ಕದ್ದು ಸೂಕ್ತವಲ್ಲ. ಕಲಾಮಂದಿರವನ್ನು ಕೊಳಕು ಮಂದಿರವನ್ನಾಗಿ ಮಾಡಲು ಯಾರೂ ಬಯಸುವುದಿಲ್ಲ. ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಕನ್ನಡ ಸಂಸ್ಕೃತಿ ಇಲಾಖೆಯವರು ಜಿಲ್ಲೆಗೆ ಒಂದು ರಂಗಮಂದಿರವನ್ನು ನಿರ್ಮಾಣ ಮಾಡಬೇಕು ಎಂಬ ಯೋಜನೆಯಲ್ಲಿ 16 ಜಿಲ್ಲೆಗಳಲ್ಲಿ ಅಂದು ಕಲಾಮಂದಿರಗಳ ಮಂಜೂರಾತಿ ನೀಡಲಾಯಿತು. ಎಂಟು ಜಿಲ್ಲೆಗಳಲ್ಲಿ ಕಲಾಮಂದಿರ ನಿರ್ಮಾಣವಾಗಿದೆ. ಅವರು ಹೇಳಿದಂತೆ ಮೈಸೂರಿನ ಕಲಾಮಂದಿರ ಪ್ರತಿಷ್ಠಿತವಾದ ಕಲಾಮಂದಿರ. ಆ ಕಲಾಮಂದಿರದಲ್ಲೇನು ರಿಪೇರಿ ಕೆಲಸಗಳಾಬೇಕಾಗಿದೆ ಅದಕ್ಕೆ ಈಗಾಗಲೇ ಸುಮಾರು ನಾಲ್ಕೂವರೆ ಕೋಟಿ ಬಿಡುಗಡೆ ಮಾಡಿ ಅಲ್ಲಿರುವ ಫ್ಯಾನುಗಳನ್ನು, ಕುರ್ಚಿಗಳನ್ನು ಬದಲಾವಣೆ ಮಾಡುವ ಕೆಲಸ ನಡೆಯುತ್ತಿದೆ. ಮಾನ್ಯ ಶಂಕರಲಿಂಗೇಗೌಡರು ನಾಳೆ ಮೈಸೂರಿಗೆ ಹೋದಾಗ ಅದನ್ನು ನೋಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ನಾವು ಉದಾಸೀನ ಮಾಡಿಲ್ಲ. ಅದಕ್ಕೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಏರ್ಪಾಡು ಮಾಡಿ ಕೊಡುತ್ತೇವೆ. ಕಲಾಮಂದಿರವನ್ನು ಅಭಿವೃದ್ಧಿ ಪಡಿಸುತ್ತೇವೆ ಹಾಗೆಯೇ ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿ ಸಲುವಾಗಿ ಖಾಸಗಿಯವರೇನಾದರೂ ಮುಂದೆ ಬಂದರೆ ಅವರಿಗೆ ಎಲ್ಲಾ ರೀತಿಯಾದ ಸಹಾಯ ನೀಡಲು ನಾವು ಸಿದ್ದರಿದ್ದೇವೆ.

ಅಧ್ಯಕ್ಷರು : ಬಳ್ಳಾರಿಯ ಜೋಳದರಾಶಿ ದೊಡ್ಡನಗೌಡರ ಕಲಾಮಂದಿರದ ಸೀಟುಗಳು ಸರಿಯಾಗಿಲ್ಲ. ತಾವು ಅಲ್ಲಿಗೆ ಹೋದಾಗ ನೋಡಿಕೊಂಡು ಬನ್ನಿ.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್: ನೋಡಿಬರುತ್ತೇನೆ.

ಅರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಹಣದ ದುರುಪಯೋಗ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಅತ್ಯಂತ ನೋವಿನಿಂದ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈ ಹಿಂದೆ ಇದೇ ಸದನದಲ್ಲಿ ಅರಕಲಗೂಡು ತಾಲ್ಲೂಕಿನ ದಶಲಕ್ಷಬಾವಿಯೋಜನೆಯಡಿಯಲ್ಲಿ ಕೃಷಿ ಇಲಾಖೆ ಮತ್ತು ತಾಲ್ಲೂಕು ಪಂಚಾಯಿತಿಯವರು ಇಬ್ಬರೂ